

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ತಾಳಿದವನು ಬಾಳಿಯಾನು!...

ಬಹಳ ವರ್ಷಗಳ ಹಿಂದೆ ಬೆಂಗಳೂರಿನ ರಾಜಾಜಿ ನಗರದಲ್ಲಿ ನವಯುವಕನೊಬ್ಬ ತನ್ನ ಮದುವೆಯ ಆಹ್ವಾನಪತ್ರಿಕೆಯನ್ನು ಬಂಧುಗಳಿಗೆ ಮತ್ತು ಸ್ನೇಹಿತರಿಗೆ ತಾನೇ ವಿತರಿಸಲು ಸ್ಕೂಟರ್ ಮೇಲೆ ಹೋಗುತ್ತಿದ್ದ. ಮುಂದೆ ಮುಂದೆ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಲಾರಿ ಆತನ ಸ್ಕೂಟರ್‌ಗೆ ಡಿಕ್ಕಿ ಹೊಡೆಯಿತು. ಪರಿಣಾಮವಾಗಿ ಮದುವೆಯ ಕನಸು ಕಾಣುತ್ತಿದ್ದ ಯುವಕ ಲಾರಿಯ ಚಕ್ರದಡಿಯಲ್ಲಿ ಸಿಕ್ಕು ತಲೆ ಒಡೆದು ಮಸಣ ಸೇರಬೇಕಾಯಿತು. ದಿನನಿತ್ಯ ಪತ್ರಿಕೆಗಳಲ್ಲಿ ಇಂತಹ ದಾರುಣ ಘಟನೆಗಳು ವರದಿಯಾಗುತ್ತಿರುತ್ತವೆ. 'ಬದುಕು ಜಟಕಾಬಂಡಿ, ವಿಧಿ ಅದರ ಸಾಹೇಬ, ಮದುವೆಗೋ ಮಸಣಕೋ ಹೋಗೆಂದಲ್ಲಿಗೆ ಹೋಗು ಮಂಕು ತಿಮ್ಮ' ಎಂದು ಡಿ.ವಿ.ಜಿ ಬರೆದದ್ದು ಇಂತಹ ದುರ್ಘಟನೆಗಳನ್ನು ನೋಡಿಯೇ ಇರಬೇಕು ಎನಿಸುತ್ತದೆ. ಡಿ.ವಿ.ಜಿ ತಮ್ಮ ಈ ಕವಿತೆಯಲ್ಲಿ ಬದುಕಿನ ಗತಿಯ ನಿಗೂಢತೆಯನ್ನು ಮನಮುಟ್ಟುವಂತೆ ಬಣ್ಣಿಸಿದ್ದಾರೆ. ತಾನೊಂದು ಬಗೆದರೆ ದೈವವೊಂದು ಬಗೆದಿತ್ತು ಎನ್ನುವಂತೆ ಸಂಭ್ರಮದ ಮದುವೆ ಮನೆಗೆ ಹೋಗಬೇಕಾದವರು ದುರದೃಷ್ಟವಶಾತ್ ಮಸಣ ಸೇರಬೇಕಾಗಬಹುದು. ಮದುವೆ ಮನೆಗೆ ಹೋಗುವುದು ಬಿಡುವುದು ನಿಮ್ಮ ಸ್ವಾತಂತ್ರ್ಯ. ಆದರೆ ಮಸಣದ ವಿಚಾರದಲ್ಲಿ ಮಾತ್ರ ನಿಮಗೆ ಸ್ವಾತಂತ್ರ್ಯವಿಲ್ಲ. ಹೋಗಲು ಇಷ್ಟವಿಲ್ಲದಿದ್ದರೂ ಹೋಗಲೇಬೇಕು. 'ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ' ಎನ್ನುವ ಪುರಂದರದಾಸರು ಬದುಕಿನ ವಾಸ್ತವತೆಯನ್ನು ಕುರಿತು ಹೀಗೆ ಕಣ್ತೆರೆಸಿದ್ದಾರೆ:

**ಹೊಸ ಮನೆಯ ಕಟ್ಟಿದೆನು ಗೃಹಶಾಂತಿ ಮನೆಯೊಳಗೆ**
**ಬಸುರಿ ಹೆಂಡತಿ ಮಗನ ಮದುವೆ ನಾಳೆ**
**ಹಸನಾಗಿ ಇದೆ ಬದುಕು ಸಾಯಲಾರೆನು ಎನಲು**
**ಕುಸುರಿದರಿಯದೆ ಬಿಡರು ಯಮನವರು ಆಗ**

ಡಿ.ವಿ.ಜಿ ಯ ಕವಿತೆಯಲ್ಲಿ ಮದುವೆಗೋ ಮಸಣಕೋ ಹೋಗುವ ಆಯ್ಕೆ ಮನುಷ್ಯನಿಗಿಲ್ಲ, ಅದು ದೈವನಿಯಾಮಕ, ಅವುಗಳಲ್ಲಿ ಯಾವುದಾದರೂ ಒಂದಕ್ಕೆ ಹೋಗಬೇಕಾಗುತ್ತದೆ ಎಂಬ ಧ್ವನಿ ಇದ್ದಂತೆ ತೋರುತ್ತದೆ. ಆದರೆ ಮದುವೆಗೂ ಹೋಗಿ ಮಸಣಕ್ಕೂ ಹೋದ ಉದಾಹರಣೆಗಳು ಇಲ್ಲದಿಲ್ಲ. ಹಳ್ಳಿಗಳಲ್ಲಿ ಬೀಗರು ಮದುವೆಗೆ ಹೋಗಲು ಮೊದಲೆಲ್ಲಾ ಎತ್ತಿನ ಗಾಡಿಗಳನ್ನು ಬಳಸುತ್ತಿದ್ದರು. ಎತ್ತುಗಳಿಗೆ ಜೂಲು ಹಾಕಿ, ಕೊರಳಿಗೆ ಗಂಟೆ ಕಟ್ಟಿ, ಕೋಡುಗಳಿಗೆ ಬಣ್ಣ ಬಣ್ಣದ ರಿಬ್ಬನ್ ಕಟ್ಟಿ, ಕಮಾನುಗಾಡಿಗಳನ್ನು ಶೃಂಗಾರ ಮಾಡಿ, ವಿಶೇಷ ಉಡುಗೆತೊಡುಗೆಗಳನ್ನು ತೊಟ್ಟ ಹೆಂಗಳೆಯರ ಸರಸಸಲ್ಲಾಪವನ್ನು ಆಲಿಸುತ್ತಾ ಗಾಡಿಯ ಮುಂದೆ ಕುಳಿತು ತಲೆಗೆ ಪೇಟಾ ಕಟ್ಟಿ, ಹುರಿಮೀಸೆಯನ್ನು ತಿರುವಿ, ಒಂದು ಕೈಯಲ್ಲಿ ಎತ್ತಿನ ಹಗ್ಗ, ಮತ್ತೊಂದು ಕೈಯಲ್ಲಿ ಬಾರುಕೋಲನ್ನು ಹಿಡಿದು ಹೂಂಕರಿಸಿ ಎತ್ತಿನ ಬಾಲ ಮುರಿದು ಕಚಗುಳಿ ಇಟ್ಟು ಸಂಭ್ರಮದಿಂದ ಸಾಲು ಸಾಲಾಗಿ ಗಾಡಿಗಳನ್ನು ಹೊಡೆಯುತ್ತಿದ್ದ ಆ ದಿಬ್ಬಣದ ದೃಶ್ಯ ಈಗ ಕಾಣಲು ಸಿಗುವುದಿಲ್ಲ. ಹಿಂದಿನ ಕಾಲದಲ್ಲಿ ಮದುವೆ ಮನೆಗೆ ಎತ್ತಿನ ಗಾಡಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಷ್ಟೂ ಬೀಗರ ದಢೂತಿ ಹೆಚ್ಚುತ್ತಿತ್ತು. ಕಾಲ ಬದಲಾವಣೆಯಾಗಿದೆ. ಈಗ ಕಲ್ಯಾಣಮಂಟಪದ ಮುಂದೆ ಕಾರು, ಬಸ್ಸು, ಟ್ರ್ಯಾಕ್ಸ್, ಟೆಂಪೊ, ಟ್ರಾಕ್ಟರ್, ಮೋಟಾರ್ ಬೈಕ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ನಿಂತಷ್ಟೂ, ಮೈಕಿನಲ್ಲಿ ಅಬ್ಬರದ ಆರ್ಕೆಸ್ಟ್ರಾ ಧ್ವನಿ ಕೇಳಿಸಿದಷ್ಟೂ ಮದುವೆ ಜೋರು. ಮಂತ್ರಿ ಮಹೋದಯರು ಬಂದರಂತೂ ಇನ್ನೂ ಜೋರು. ಮಂತ್ರಿಗಳ ಆಪ್ತಕಾರ್ಯದರ್ಶಿಗಳೂ ಸಹ ತಮ್ಮ ಧಣಿಗಳ ಹಿಂಬಾಲಕರ ಮದುವೆ ದಿನಾಂಕಗಳಿಗೆ ಹೊಂದಿಕೆಯಾಗುವಂತೆ ಜಿಲ್ಲೆಯ ಅಭಿವೃದ್ಧಿಕಾರ್ಯಗಳ ಸಭೆಯನ್ನು ಏರ್ಪಡಿಸುತ್ತಾರೆ. ಇಲ್ಲದಿದ್ದರೆ Audit objection ಬರುತ್ತದೆ. ನೆಪಮಾತ್ರಕ್ಕೆ ಜಿಲ್ಲಾಡಳಿತ ಸಭೆ, ಮುಖ್ಯವಾದ ಅಜೆಂಡಾ ಹಿಂಬಾಲಕರ ಮಗಳ ಮದುವೆ! ಇನ್ನು ಮುಂದೆ ನಡೆಯುವ ಮಂತ್ರಿಮಂಡಲದ ಸಭೆಗಳನ್ನು ಕಲ್ಯಾಣ ಮಂಟಪಗಳಲ್ಲಿಯೇ ನಡೆಸಿದರೆ ಆಡಳಿತಾತ್ಮಕವಾದ ಯಾವ ಖರ್ಚೂ ಬರದೆ ರಾಜ್ಯಕ್ಕೆ ಕಲ್ಯಾಣವಾಗಬಹುದೇನೋ!

ಹಿಂದಿನ ಕಾಲದಲ್ಲಿ ಮದುವೆ ಶಾಸ್ತ್ರಗಳು ಒಂದು ದಿನಕ್ಕೆ ಮುಗಿಯುತ್ತಿರಲಿಲ್ಲ. ಈಗ ಯಾರಿಗೂ ಪುರುಸೊತ್ತು ಇಲ್ಲ. ಮುಹೂರ್ತದ ಸಮಯಕ್ಕೆ ಸರಿಯಾಗಿ ಹಾಜರಾಗಿ ಮದುಮಕ್ಕಳಿಗೆ ಅಕ್ಷತೆ ಹಾಕಿ ಮೃಷ್ಟಾನ್ನ ಭೋಜನವನ್ನು ಮುಗಿಸಿಕೊಂಡು ಹೊರಟರೆಂದರೆ ಮಧ್ಯಾಹ್ನದ ವೇಳೆಗೆ ಮದುವೆ ಮನೆ ಬಣ ಬಣ, ರಣ ರಣ. ಮದುವೆ ಮನೆಯಿಂದ ಹೊರಟ ಬೀಗರ ಜೀವನ 'ರಣರಂಗ'ವಾಗದಿದ್ದರೆ ಸಾಕು. ಅವಸರದಲ್ಲಿ ಹಿಂತಿರುಗುವಾಗ ಪಯಣಿಸುತ್ತಿದ್ದ ವಾಹನ ದಾರಿಯಲ್ಲಿ ಲಾರಿಗೆ ಡಿಕ್ಕಿ ಹೊಡೆದೋ, ರೈಲಿಗೆ ಸಿಕ್ಕೋ ಮದುವೆಗೂ ಹೋಗಿ ಮಸಣಕ್ಕೂ ಹೋದ ದುರ್ಘಟನೆಗಳು ಆಗಾಗ್ಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇರುತ್ತವೆ. ಕೆಲವೊಮ್ಮೆ ಹಸೆಮಣೆ ಏರಿದ ಮದುಮಕ್ಕಳೂ ಸಹ ಇಂತಹ ದುರಂತಗಳಿಗೆ ಒಳಗಾಗಿ ಮದುವೆ ಮನೆಯಲ್ಲಿ ಸ್ಮಶಾನಮೌನ ಆವರಿಸುವುದೂ ಉಂಟು.

'ದಿನಾ ಸಾಯುವವರಿಗೆ ಅಳುವವರು ಯಾರು?' ಎಂಬ ಗಾದೆ ಮಾತು ಸರಳ ಶಬ್ದಗಳಿಂದ ಕೂಡಿದ್ದರೂ ಅರ್ಥವಾಗುವುದು ಕಷ್ಟ. ಹಾಗೆಂದರೇನು? ಒಬ್ಬರೇ ಅನೇಕ ಸಾರಿ ಸಾಯಲು ಹೇಗೆ ಬರುತ್ತದೆ? ನಿತ್ಯವೂ ಪತ್ರಿಕೆಗಳಲ್ಲಿ ವರದಿಯಾಗುವ ಇಂತಹ ರಸ್ತೆ ಅಪಘಾತಗಳ ಸುದ್ದಿಯನ್ನು ಓದಿದಾಗ ಗಾದೆ ಮಾತಿನ ತಾತ್ಪರ್ಯ ಚೆನ್ನಾಗಿ

ಅರ್ಥವಾಗುತ್ತದೆ. ಯಾವುದೇ ಸುದ್ದಿ ಅಪರೂಪವಾದಾಗ ಅದಕ್ಕೆ ಒಂದು ವಿಶೇಷತೆ ಇರುತ್ತದೆ. ಅಪರೂಪಕ್ಕೆ ಮನೆಗೆ ಅತಿಥಿಗಳು ಬಂದರೆ, ಒಂದೆರಡು ದಿನ ಇದ್ದರೆ ಚೆಂದ. ವಾರಗಟ್ಟಲೆ, ತಿಂಗಳಗಟ್ಟಲೆ ಮನೆಯಲ್ಲೇ ಝಾಂಡಾ ಊರಿದರೆ 'ತಿಥಿ' ಮಾಡಬೇಕೆನ್ನಿಸುತ್ತದೆ ಅಲ್ಲವೇ? "Fish and guests stink in three days" ಎಂದು ಆಂಗ್ಲಲೇಖಕ ಬೆಂಜಮಿನ್ ಫ್ರಾಂಕ್ಲಿನ್ ಹೇಳಿದರೆ ಕನ್ನಡದ ಕವಿ ಪರಮೇಶ್ವರ ಭಟ್ಟರು "ಮೀನು ಮೂರು ದಿನಕ್ಕೆ ನಾರುವುದೆಂಬರು ನಂಟರು ಒಂದೇ ದಿನಕ್ಕೆ ನಾರುವರು" ಎಂದು ಹೇಳುತ್ತಾರೆ. ಹಾಗೆಯೇ ನಿತ್ಯವೂ ವರದಿಯಾಗುವ ಸಾವಿನ ಘಟನೆಗಳು ಎಲ್ಲರಿಗೂ ಕಣ್ಣೀರು ತರಿಸುವುದಿಲ್ಲ. ಪ್ರತಿನಿತ್ಯ ಪತ್ರಿಕೆಗಳಲ್ಲಿ ಒಂದಲ್ಲ ಒಂದು ರಸ್ತೆ ಅಪಘಾತದ ಸುದ್ದಿ ಇದ್ದೇ ಇರುತ್ತದೆ. ಅಪಘಾತದಲ್ಲಿ ಮಡಿದವರು ನಿಮ್ಮ ಬಂಧುಗಳು ಅಥವಾ ಸ್ನೇಹಿತರಾಗಿದ್ದರೆ ಆಗುವ ನೋವು ಉಳಿದ ಓದುಗರಿಗೆ ಆಗುವುದಿಲ್ಲ. ದಿನನಿತ್ಯ ಪತ್ರಿಕೆಗಳ ಮುಖಪುಟಗಳಲ್ಲಿ ವರದಿಯಾಗುವ ರಾಜಕೀಯ ದೊಂಬರಾಟಕ್ಕೆ ಓದುಗರು ಒಗ್ಗಿಕೊಂಡಂತೆ ಇಂತಹ ದುರ್ಘಟನೆಗಳಿಗೂ ಒಗ್ಗಿಕೊಂಡಿದ್ದಾರೆ. ಅಂತಹ ಸುದ್ದಿಗಳು ಇಲ್ಲದೇ ಹೋದರೆ ಅಂದಿನ ಪತ್ರಿಕೆ ನೀರಸ. ಬೆಳಗಿನ ಚಹಾ ಕಾಫಿ ಸಹ ರುಚಿಸುವುದಿಲ್ಲ. ಏಕೆ ಹೀಗೆ ಆಗುತ್ತಿದೆ, ಇದರಲ್ಲಿ ವೈಯಕ್ತಿಕ, ಸಾಮಾಜಿಕ ಹಾಗೂ ಸರ್ಕಾರದ ಜವಾಬ್ದಾರಿ ಏನು ಎಂಬ ಬಗ್ಗೆ ಯಾರೂ ಅಷ್ಟಾಗಿ ತಲೆಕೆಡಿಸಿಕೊಳ್ಳುತ್ತಿಲ್ಲವೇಕೆ?

ಐರೋಪ್ಯ ದೇಶಗಳಲ್ಲಿ ಆಗುವ ರಸ್ತೆ ಅಪಘಾತಗಳ ಸಂಖ್ಯೆಗಿಂತ, ಆಫ್ರಿಕಾ ದೇಶಗಳು ಮತ್ತು ಭಾರತದಲ್ಲಿ ಆಗುವ ಅಪಘಾತಗಳ ಸಂಖ್ಯೆಯೇ ಜಾಸ್ತಿ. BBC ವರದಿಗಾರ ನಡೆಸಿದ ಒಂದು ಅಧ್ಯಯನದ ಪ್ರಕಾರ ಟಾನ್ಜೇನಿಯಾದಲ್ಲಿ ಒಂದು ವರ್ಷದ ಅವಧಿಯಲ್ಲಿ ಹತ್ತು ಸಾವಿರ ವಾಹನಗಳಿಗೆ ಅರವತ್ತಾರು ಜನರು ಸತ್ತರೆ ಬ್ರಿಟನ್‌ನಲ್ಲಿ ಕೇವಲ ಒಬ್ಬ ಸತ್ತಿದ್ದಾನೆ. ಇನ್ನೊಂದು ಲೆಕ್ಕಾಚಾರದ ಪ್ರಕಾರ ಭಾರತದಲ್ಲಿ ಸಂಭವಿಸುವ ರಸ್ತೆ ಅಪಘಾತಗಳಲ್ಲಿ ಪ್ರತಿ ಏಳು ನಿಮಿಷಗಳಿಗೆ ಒಬ್ಬ ಸಾಯುತ್ತಾನೆ, ಪ್ರತಿ ಎರಡು ನಿಮಿಷಗಳಿಗೆ ಒಬ್ಬ ಗಾಯಗೊಳ್ಳುತ್ತಾನೆ. ಒಟ್ಟಾರೆ ರಸ್ತೆ ಅಪಘಾತಗಳಲ್ಲಿ ವರ್ಷದಲ್ಲಿ 75 ಸಾವಿರ ಜನರು ಸಾಯುತ್ತಾರೆ, 3 ಲಕ್ಷದ 50 ಸಾವಿರ ಜನರು ತೀವ್ರವಾಗಿ ಗಾಯಗೊಳ್ಳುತ್ತಾರೆ. ಇವುಗಳಲ್ಲಿ ಹೆಚ್ಚಿನ ಅಪಘಾತಗಳು ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಡೆಯುತ್ತವೆ. ಆದಕಾರಣ ನಮ್ಮ ರಾಷ್ಟ್ರೀಯ ಹೆದ್ದಾರಿಗಳನ್ನು ಯಮಲೋಕದ ಹೆದ್ದಾರಿಗಳು (NH4, NH5 → YH4, YH5) ಎಂದು ಕರೆದರೆ ಯಾವ ಅತಿಶಯೋಕ್ತಿಯೂ ಆಗಲಾರದು. ಈ ಹಿನ್ನೆಲೆಯಲ್ಲಿ ನೀವು ರಾಷ್ಟ್ರೀಯ ಹೆದ್ದಾರಿಯಲ್ಲಿ ಪಯಣಿಸುವಾಗ ನಿಮ್ಮ ಹಿಂದೆ ಮುಂದೆ ಬರುವ 'ಯಮದೂತ'ರಿಂದ ಎಚ್ಚರವಿರುವುದು ಒಳ್ಳೆಯದು. ನಿಮ್ಮ ಹಿಂದೆ ಬರುವ ಈ ಯಮದೂತರಿಗೆ ನಿಮ್ಮ ಮೇಲೆ ಬಹಳ ಸಿಟ್ಟು. ಒಂದೇ ಸಮನೆ ಹೂಂಕರಿಸುತ್ತಿರುತ್ತಾರೆ. ಆದರೆ ಅವರನ್ನು ಒಲಿಸಿಕೊಳ್ಳುವುದು ಬಹಳ ಸುಲಭ. ಅಂಥವರಿಗೆ ನೀವು ವಿನಯದಿಂದ ಕಿಟಕಿಯಾಚೆ ಒಂದೇ ಕೈಯಲ್ಲಿ ಕೈಮುಗಿದು ಮುಂದಕ್ಕೆ ಹೋಗಲು ದಾರಿ ಮಾಡಿಕೊಟ್ಟರೆ ಸಾಕು ನೀವು ಅವರಿಂದ ಬಚಾವಾಗುತ್ತೀರಿ.

ಸಿರಿಗೆರೆಯಿಂದ ಬೆಂಗಳೂರಿಗೆ ಕಾರಿನಲ್ಲಿ ಪ್ರಯಾಣಿಸಲು ನಮಗೆ ಸುಮಾರು ಮೂರೂವರೆ ಗಂಟೆ ಬೇಕು. ನಮ್ಮ ಹಿಂದೆ ಹಾರನ್ ಮಾಡುವ ಚಾಲಕರಿಗೆ 'ಸೆಡ್ಡು' ಹೊಡೆಯದೆ ಸೈಡ್ ಕೊಡುವಂತೆ ನಮ್ಮ ಚಾಲಕನಿಗೆ ಕಟ್ಟುನಿಟ್ಟಾಗಿ ಆದೇಶಿಸುತ್ತೇವೆ. ನಮ್ಮನ್ನು ಹಿಂದಕ್ಕೆ ತಳ್ಳಿ ಮುಂದೆ ಹೋದ ಆ 'ವಿಜಯಿ' ನಮಗೆ ನೆಲಮಂಗಲದಲ್ಲೋ, ಬೆಂಗಳೂರಿನ ಹೊರವಲಯದಲ್ಲೋ ಸಿಕ್ಕುತ್ತಾನೆ, ನೋಡುತ್ತಿರು ಎಂದು ನಮ್ಮ ಚಾಲಕನನ್ನು ಸಮಾಧಾನಪಡಿಸುತ್ತೇವೆ. ಇಡೀ ಪ್ರಯಾಣದ ಅವಧಿಯಲ್ಲಿ ಅವನು ಉಳಿಸುವುದೆಂದರೆ ಕೇವಲ 15 ನಿಮಿಷ. ಹೆಚ್ಚೆಂದರೆ 20 ನಿಮಿಷ. ಅಷ್ಟಕ್ಕಾಗಿ Blood Pressure ಏರಿಸಿಕೊಂಡು ತನ್ನ ಜೀವವನ್ನೇ ಪಣಕ್ಕಿಟ್ಟು ಕಳೆದುಕೊಳ್ಳುವ ಅಪಾಯವಿದೆಯೆಂಬುದನ್ನು ಯಾವ ಚಾಲಕನೂ ಗಮನಿಸುವುದಿಲ್ಲ. ಕಾರಿನಲ್ಲಿ ಸಂಚರಿಸುವವರು ಚಾಲಕ ಎಷ್ಟೇ ನಂಬಿಗಸ್ಥನಾಗಿದ್ದರೂ ಅವನ ಮೇಲೆ ನಿಗಾ ಇಡುವುದು ಒಳ್ಳೆಯದು. ಸಮಯ ಸಂದರ್ಭಗಳು ಒಂದೇ ಸಮನಾಗಿ ಇರುವುದಿಲ್ಲ. ನಂಬಿ ನಿದ್ರೆ ಹೋಗುವುದು ತಪ್ಪು. ನಮ್ಮ ಗುರುಯರ್ವರು ಕಾರಿನಲ್ಲಿ ಎಂದೂ ನಿದ್ರೆಮಾಡುತ್ತಿದ್ದಿಲ್ಲ. ಯಾವಾಗಲೂ ಚಾಲಕನ ಮೇಲೆ ಒಂದು ಕಣ್ಣು ಇಟ್ಟಿರುತ್ತಿದ್ದರು. ವೇಗವಾಗಿ ಓಡಿಸುತ್ತಿದ್ದರೆ ನಿಯಂತ್ರಿಸುತ್ತಿದ್ದರು. ಅದೇ ಅಭ್ಯಾಸ ನಮಗೂ ಆಗಿದೆ. ನಿದ್ರೆಮಾಡುವ ಪೂಜಾಮರಿಗಳಿಗೆ ಎಚ್ಚರದಿಂದಿರಲು ದಾರಿಯಲ್ಲಿ ಎದುರಿಗೆ ಬರುವ ವಾಹನಗಳನ್ನು ಎಣಿಸಲು ಹೇಳುತ್ತಿದ್ದರು. ತೂಕಡಿಸಿ ತಪ್ಪು ಎಣಿಸುತ್ತಿದ್ದ ಮರಿಗಳು ಸಿಕ್ಕಿಬೀಳುತ್ತಿದ್ದರು.

ನಮ್ಮ ಕಾರಿನ ಚಾಲಕ ತುಂಬಾ ಎಚ್ಚರಿಕೆಯಿಂದ ವಾಹನ ನಡೆಸುತ್ತಾನೆ. ಆದರೂ ಎಲ್ಲ ಚಾಲಕರ ಜಾಯಮಾನದಂತೆ ಅವನ ವೇಗವೂ ಜಾಸ್ತಿ. ದಾರಿಯುದ್ದಕ್ಕೂ Speed Regulator ಯಂತ್ರದ ಕೆಲಸವನ್ನು ನಾವು ಹಿಂದಿನಿಂದ ಮಾಡುವುದು ಅವನಿಗೆ ಅಸಹನೆ. 'ಅವಸರವೇ ಅಪಘಾತಕ್ಕೆ ಕಾರಣ' ಎಂದು ಎಷ್ಟು ಹೇಳಿದರೂ ಕೇಳುವುದಿಲ್ಲ. ಇದನ್ನು ಶಿಷ್ಯರಿಗೆ ಹೇಳಿದರೆ ನಗುತ್ತಾರೆ. ಏಕೆಂದರೆ ಅವರು ನಮ್ಮ ಚಾಲಕನಿಗಿಂತಲೂ ವೇಗವಾಗಿ ಓಡಿಸುತ್ತಾರೆ. ದಾರಿಯಲ್ಲಿ ಕಂಡು ಬರುವ ಆ ಎಚ್ಚರಿಕೆಯ ಫಲಕದ ಆಶಯದಂತೆ ಯಾರೂ ನಡೆದುಕೊಳ್ಳುವುದಿಲ್ಲ. ಅಲ್ಲಲ್ಲಿ ಡಿಕ್ಕಿ ಹೊಡೆದು ರಸ್ತೆಯ ಪಕ್ಕದಲ್ಲಿ ನಜ್ಜುಗುಜ್ಜಾಗಿ ಬಿದ್ದ ವಾಹನಗಳನ್ನು ನೋಡಿ ಅವುಗಳಲ್ಲಿ ಪ್ರಯಾಣಿಸುತ್ತಿದ್ದವರು ಯಾರೂ ಬದುಕಿ ಉಳಿದಿರಲು ಸಾಧ್ಯವಿಲ್ಲವೆಂದು ಮಾತನಾಡುತ್ತಾ ಮುಂದೆ ಸಾಗುತ್ತಾರೆಯೇ ಹೊರತು ವೇಗವಾಗಿ ಓಡಿಸುವುದರಿಂದ ಮುಂದೊಂದು ದಿನ ಅದೇ ಮಾತನ್ನು ಬೇರೆಯವರು ತಮ್ಮ ಬಗ್ಗೆಯೂ ಮಾತನಾಡುವಂತಾಗುತ್ತದೆಯೆಂಬ ಒಳ ಎಚ್ಚರ ಇರುವುದಿಲ್ಲ! ಮಹಾಭಾರತದಲ್ಲಿ ಬರುವ 'ಯಕ್ಷಪ್ರಶ್ನೆ' ಪ್ರಸಂಗ ನಿಮಗೆ ಗೊತ್ತಿರಬಹುದು. ಕಾಡಿನಲ್ಲಿ ಅಡ್ಡಾಡುತ್ತಿರುವಾಗ ಬಾಯಾರಿಕೆಯಾಗಿ ಸರೋವರದ ನೀರನ್ನು ಕುಡಿಯಲು ಹೋದಾಗ ಅದರ ಮಾಲೀಕನಾದ ಯಕ್ಷ 'ಈ ಜಗತ್ತಿನಲ್ಲಿ ಆಶ್ಚರ್ಯಕರವಾದ ಸಂಗತಿ ಏನು?' ಎಂದು ಕೇಳಿದನಂತೆ. ಅದಕ್ಕೆ ಉತ್ತರ ಕೊಡದ ನಕುಲ-ಸಹದೇವಾದಿ ಸಹೋದರರು ಸತ್ತುಬಿದ್ದರು. ಧರ್ಮರಾಯ ಕೆಳಗಿನಂತೆ ಉತ್ತರ ಕೊಟ್ಟು ಬದುಕಿಸಿಕೊಂಡನಂತೆ:

**ಅಹನ್ಯಹನಿ ಭೂತಾನಿ ಪ್ರವಿಶಂತಿ ಯಮಾಲಯಂ ।**
**ಶೇಷಾಃ ಸ್ಥಾವರಮಿಚ್ಛಂತಿ ಕಿಮಾಶ್ಚರ್ಯಮತಃ ಪರಂ ॥**

ಇದರ ಆಶಯ: ನಿತ್ಯವೂ ಒಂದಲ್ಲ ಒಂದು ಜೀವಿ ಸಾಯುತ್ತದೆ. ಇದನ್ನು ನೋಡಿಯೂ ಮನುಷ್ಯ ತಾನು ಶಾಶ್ವತವಾಗಿ ಈ ಭೂಮಿಯ ಮೇಲೆ ಬದುಕಬೇಕೆಂದು ಬಯಸುತ್ತಾನಲ್ಲಾ ಇದಕ್ಕಿಂತ ಆಶ್ಚರ್ಯವಾದ ಸಂಗತಿ ಈ ಜಗತ್ತಿನಲ್ಲಿ ಏನಿದೆ? ಧರ್ಮರಾಯನ ಈ ಉತ್ತರದ ಎಳೆಯನ್ನು ಮುಂದುವರಿಸಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿತ್ಯವೂ ನಡೆಯುತ್ತಿರುವ ಅಪಘಾತಗಳನ್ನು ಕಣ್ಣಾರೆ ನೋಡಿಯೂ ವಾಹನಚಾಲಕರು ಉಪೇಕ್ಷಿಸಿ ವಾಹನಗಳನ್ನು ವೇಗವಾಗಿ ನಡೆಸುತ್ತಾರಲ್ಲಾ ಏಕೆ? ಎಂಬುದೇ ಆಧುನಿಕ ಕಾಲದ 'ಯಕ್ಷಪ್ರಶ್ನೆ'ಯಾಗಿದೆ. ಧರ್ಮರಾಯ ಯಕ್ಷಪ್ರಶ್ನೆಗೆ ಉತ್ತರ ಕೊಟ್ಟು ತನ್ನ ಎಲ್ಲ ತಮ್ಮಂದಿರನ್ನೂ ಬದುಕಿಸಿಕೊಂಡಂತೆ ಈ ಆಧುನಿಕ 'ಯಕ್ಷಪ್ರಶ್ನೆ'ಗೆ ಉತ್ತರ ಕೊಟ್ಟು ಅಪಘಾತದಲ್ಲಿ ಸತ್ತವರನ್ನು ಬದುಕಿಸಿಕೊಳ್ಳಲು ಯಾವ ಬಂಧುಗಳಿಂದಲೂ ಸಾಧ್ಯವಿಲ್ಲವೆಂಬುದನ್ನು ನೆನಪಿಟ್ಟುಕೊಳ್ಳುವುದು ಒಳ್ಳೆಯದು.

ಹವ್ಯಾಸಿ ಕಲಾವಿದರು ಇರುವುದನ್ನು ಕೇಳಿದ್ದೀರಿ. ಹವ್ಯಾಸಿ ಕವಿಗಳಿರುವುದನ್ನು ನೀವು ಕೇಳಿರಲಾರಿರಿ. ಅಂಥವರಲ್ಲೊಬ್ಬರು ನಮ್ಮ ಸಿರಿಗೆರೆಯ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ರಾ. ವೆಂಕಟೇಶ ಶೆಟ್ಟಿಯವರು. ಇಲ್ಲಿಗೆ 20 ವರ್ಷಗಳ ಹಿಂದೆ ನಾವು ಕೈಗೊಂಡಿದ್ದ ಪಾನನಿಷೇಧ ಆಂದೋಳನದಿಂದ ಪ್ರೇರಿತರಾಗಿ ಅವರು ಬರೆದಿದ್ದ ಅಪ್ರಕಟಿತ ಕವಿತೆ ಹೀಗಿದೆ:

**ಡ್ರೈವರ್ ವೇದಾಂತ!**

**ಸೀಟಿನಲಿ ನಾನು ಬಾಟ್ಲಿಯಲಿ ಪರಮಾತ್ಮನು ಇರುವುದೇ ದ್ವೈತ**
**ಬಾಟ್ಲಿಯ ಪರಮಾತ್ಮನು ಹೊಟ್ಟೆಗಿಳಿದರೆ ಅದೇ ಅದ್ವೈತ**
**ಕಣ್ಣು ಮಂಜಾಗಿ ರೋಡು ಎರಡಾಗಿ**
**ಲಾರಿ ಡ್ಯಾನ್ಸ್ ಮಾಡುವುದೇ ವಿಶಿಷ್ಟಾದ್ವೈತ**
**ಮರಕ್ಕೆ ಡಿಕ್ಕಿ ಹೊಡೆದು ಪಕ್ಕೆಲಬು ಮುರಿದು ಗೊಟಕ್ ಎಂದರೆ**
**ಅದೇ ಶಕ್ತಿ ವಿಶಿಷ್ಟಾದ್ವೈತ ಕಾಣಾ, ಗೊಟಕೇಶ್ವರಾ!**

ಅಪಘಾತಗಳಿಗೆ ಮುಖ್ಯಕಾರಣ ವಾಹನದ ತಾಂತ್ರಿಕ ದೋಷಕ್ಕಿಂತ ಚಾಲಕನ ಬೇಜವಾಬ್ದಾರಿ, ಪಾನಮತ್ತತೆ ಮತ್ತು ತಾಳ್ಮೆ ಇಲ್ಲದಿರುವುದು. ನೀವು ಮಾತ್ರ ಸರಿಯಾಗಿದ್ದರೆ ಸಾಲದು ನಿಮ್ಮ ಎದುರಿಗೆ ಬರುವವರು ಸರಿಯಾಗಿದ್ದಾರೆಯೇ ಹೇಗೆ ಎಂಬುದನ್ನೂ ಸರಿಯಾಗಿ ಗಮನಿಸಬೇಕಾಗುತ್ತದೆ. ನನ್ನದೇನೂ ತಪ್ಪಿಲ್ಲ ಎಂದು ವಾದಿಸುವುದರಿಂದ ಏನೂ ಪ್ರಯೋಜನವಿಲ್ಲ. ನೀವು ತಪ್ಪು ಮಾಡದಿದ್ದರೂ ಆಗಬಾರದ ಅನಾಹುತ ಕ್ಷಣಾರ್ಧದಲ್ಲಿ ಆಗಿಹೋಗುತ್ತದೆ. ನೀವು ಮಾಡದ ತಪ್ಪಿಗಾಗಿ ನಿಮ್ಮ ಜೀವವನ್ನೇ ತೆರಬೇಕಾಗುತ್ತದೆ ಇಲ್ಲವೇ ಜೀವನವಿಡೀ ನರಕಯಾತನೆಯನ್ನು ಅನುಭವಿಸಬೇಕಾಗುತ್ತದೆ. ಆದಕಾರಣವೇ ಹಿರಿಯರು ಹೇಳಿದ್ದು 'ತಾಳಿದವನು ಬಾಳಿಯಾನು'! ಇದನ್ನು ಎಲ್ಲ ಚಾಲಕರೂ ನೆನಪಿಟ್ಟುಕೊಳ್ಳುವುದು ಒಳ್ಳೆಯದು.

11.11.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑